# ಬಸವಣ್ಣನವರ ಜೀವನ ಮತ್ತು ಅವರ ಸಮಾಜ ಸುಧಾರಣೆ

ಎಂ.ಟಿ. ವಿಶ್ವನಾಥಯ್ಯ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

## ಮಾನವೀಯತೆಯ ವಿಸ್ತರಣೆ

ದಯೆಯೇ ಧರ್ಮದ ಮೂಲವೆಂದು ಹೇಳಿದ ಬಸವಣ್ಣನವರು ಮಾನವೀಯತೆಯನ್ನು ವಿಸ್ತರಿಸಿದರು. ಮನುಷ್ಯರ ನೋವನ್ನು ಮನುಷ್ಯರೇ ಅರ್ಥೈಸಿಕೊಳ್ಳಬೇಕಾದ ಸತ್ಯವನ್ನು ಸಾರಿದರು. ಜಾತಿ, ವರ್ಗ, ಅಂತಸ್ತು, ದೇಶ, ಭಾಷೆ, ಲಿಂಗ, ವಯಸ್ಸು—ಈ ಮುಂತಾದ ಭಿನ್ನತೆಯ ಗೋಡೆಗಳನ್ನು ಕಟ್ಟಿ ಮನುಷ್ಯ-ಮನುಷ್ಯನನ್ನು ದ್ವೇಷಿಸುವುದು, ಸೇಡು ತೀರಿಸಿಕೊಳ್ಳುವುದು ಇತಿಹಾಸದುದ್ದಕ್ಕೂ ಕಾಣುತ್ತಿದೆ. ಆದರೆ ಮನುಷ್ಯನಲ್ಲಿ ಮಾನವೀಯ ಮೌಲ್ಯಗಳು ಬೆಳೆದು ನಿಂತರೆ ಈ ಸೇಡು, ಅಹಂಕಾರ, ಅಸಮಾನತೆಗಳು ಅಳಿದು ಹೋಗುತ್ತವೆ. ಈ ಸತ್ಯವನ್ನು ಬಸವಣ್ಣನವರು ಅನೇಕ ಲೌಕಿಕ ಉದಾಹರಣೆಗಳ ಮುಖಾಂತರ ಸ್ಪಷ್ಟಪಡಿಸಿದರು. ಸಕಲ ಜೀವಾತ್ಮರಿಗೂ ಲೇಸನ್ನು ಬಯಸುವ ಪರಿಯನ್ನು ವಿವರಿಸಿ ಹೇಳಿದರು.

ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯಾ
ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ....
ಕಾಗೆ ಒಂದಗಳ ಕಂಡಡೆ ಕೂಗಿ ಕರೆಯದೆ ತನ್ನ ಬಳಗವ
ಕೋಳಿ ಒಂದು ಕುಟುಕ ಕಂಡಡೆ ಕೂಗಿ
ಕರೆಯದೆ ತನ್ನ ಕುಲವನೆಲ್ಲವ....

ಇಂತಹ ಅನೇಕ ವಚನಗಳ ಮುಖಾಂತರ ಮನುಷ್ಯನಲ್ಲಿ ಮಾನವೀಯ ಪ್ರಜ್ಞೆಯನ್ನು ಮೂಡಿಸಿದರು. 'ತನಗೆ ಮುನಿವವರಿಗೆ ತಾ ಮುನಿಯಲೇಕಯ್ಯಾ' ಎಂದು ವಿವರಿಸಿ ಹೇಳಿದರು. ಕೂಡಿ ಬದುಕುವ, ಹಂಚಿಕೊಂಡು ತಿನ್ನುವ ಕಾಗೆ-ಕೋಳಿಗಳ ಉದಾರಹಣೆ ಕೊಟ್ಟು ಮನುಷ್ಯನಾದವ, ಕಾಗೆ-ಕೋಳಿಗಳಿಗಿಂತಲೂ ಕಡೆಯಾದರೆ ಹೇಗೆ? ಎಂದು ಪ್ರಶ್ನಿಸುವುದರ ಮೂಲಕ ಮನುಷ್ಯನ ಮಾನವೀಯತೆಯನ್ನು ಜಾಗೃತಗೊಳಿಸಿದರು. ಮನುಷ್ಯತ್ವವನ್ನು ಮರೆತು ಅಹಂಕಾರದ ಮದದಲ್ಲಿ ಮೆರೆಯುವಂಥವರನ್ನು ಕಂಡು ತೀವ್ರವಾಗಿ ವಿಡಂಬಿಸಿದರು.

ಏನಿ ಬಂದಿರಿ, ಹದುಳವಿದ್ದಿರೆ ಎಂದಡೆ
ನಿಮ್ಮ ಮೈಸಿರಿ ಹಾರಿ ಹೋಹುದೆ ?
ಕುಳ್ಳಿರೆಂದಡೆ ನೆಲ ಕುಳಿಹೋಹುದೆ ?
ಒಡನೆ ನುಡಿದಡೆ ಸಿರ ಹೊಟ್ಟೆಯೊಡೆವುದೆ ?
ಕೊಡಲಿಲ್ಲವಿದ್ದಡೊಂದು ಗುಣವಿಲ್ಲದಿದ್ದಡೆ
ಕೆಡಹಿ ಮೂಗಕೊಯ್ಯದೆ ಮಾಣ್ಬನೆ ಕೂಡಲ ಸಂಗಮದೇವರು

ಪ್ರಸ್ತುತ ಸಾಮಾಜಿಕ ಸಂದರ್ಭ ಬಸವಣ್ಣನವರಂತಹ ವಿಚಾರವಾದಿಗಳ ವಿಚಾರಗಳೊಂದಿಗೆ ಮತ್ತೆ ಬೆಳೆಯಬೇಕಾಗಿದೆ - ಬೆಳಗಬೇಕಾಗಿದೆ.

ಇಂತಹ ಅನೇಕ ವಚನಗಳು ಇಂದಿನ ಸಾಮಾಜಿಕ ಸಂದರ್ಭಕ್ಕೆ ತೀರ ಅಗತ್ಯವಾಗಿವೆ. ಬದುಕಿನ ಅದಮ್ಯತೆಯನ್ನು ಹೇಳಿದ ಬಸವಣ್ಣನವರು ಅದರ ನೆಲೆಗಳನ್ನು ಗುರುತಿಸಿದರು. ಜೀವನೋತ್ಸಾಹದ ಜೊತೆಗೆ ಜೀವನ ಪ್ರೀತಿಯನ್ನೂ ಕಲಿಸಿದರು. ಮಾನವೀಯ ಮೌಲ್ಯಗಳು ಬೆಳೆದಾಗ ಮಾತ್ರ ಮನುಷ್ಯ ಸಂಸ್ಕೃತಿ ಬೆಳೆಯಬಲ್ಲದು. ಕೇವಲ ಆರ್ಥಿಕ-ಸಾಮಾಜಿಕ ಸಮಾನತೆ ಬಂದಾಕ್ಷಣ ಮನುಷ್ಯ ಎತ್ತರಕ್ಕೇರಲಾರ. ಮಾನವೀಯತೆ ಬೆಳೆದಾಗ ಮಾತ್ರ ಇದು ಸಾಧ್ಯ. ಇಂತಹ ಮಾನವೀಯ ಮೌಲ್ಯಗಳನ್ನು ಸ್ಥಾಪಿಸಿ ಮನುಷ್ಯರಿಗೆ ಬೆಲೆ ಕೊಟ್ಟ ಬಸವಣ್ಣನವರ ವಿಚಾರ ಇಂದಿಗೂ ಸ್ವಾಗತಾರ್ಹವಾಗಿದೆ.

ಇಂದು ಜಗತ್ತು ಸಣ್ಣದಾಗಿದೆ. ವಿಜ್ಞಾನ ಬೆಳೆದು ನಿಂತಿದೆ. ಆದರೆ ಮನುಷ್ಯ ದಿನದಿಂದ ದಿನಕ್ಕೆ ಯಾಂತ್ರಿಕನಾಗುತ್ತಿದ್ದಾನೆ, ಸ್ವಾರ್ಥಿಯಾಗುತ್ತಿದ್ದಾನೆ. ಬಸವಣ್ಣನವರ ಈ ವಿಚಾರಗಳನ್ನು ಮತ್ತೆ ಮತ್ತೆ ಮೆಲುಕು ಹಾಕಿದರೆ ಖಂಡಿತ ಬದಲಾವಣೆ ಸಾಧ್ಯ. ಬಸವಣ್ಣನವರು ಪ್ರಮುಖವಾಗಿ ಮನಸ್ಸನ್ನು ಕಟ್ಟುವ ಕೆಲಸವನ್ನು ಮಾಡಿದರು. ಮಾನವೀಯತೆಯನ್ನು ಬೆಳೆಸುವುದೇ ನಿಜವಾದ ಹೋರಾಟವೆಂದು ಅರಿತರು. ಅಧಿಕಾರ ಅಂತಸ್ತುಗಳ ಸಮಾನತೆಗಿಂತ ಸಾಂಸ್ಕೃತಿಕವಾದ ಸಮಾನತೆ ದೊಡ್ಡದೆಂದು ಭಾವಿಸಿದರು. ಇಂತಹ ಸಂಸ್ಕೃತಿ ಯಾವ ಕಾನೂನುಗಳಿಂದಲೂ ಬೆಳೆಯಲಾರದೆಂದು ತಿಳಿದುಕೊಂಡ ಅವರು ಮನುಷ್ಯರಲ್ಲಿ ಅರಿವು ಮೂಡಿಸುವುದರ ಮೂಲಕ ಈ ಸಾಧನೆ ಸಾಧ್ಯವೆಂದು ಮನಗಂಡರು. ಬಸವಣ್ಣನವರು ಬದುಕಿಹೋಗಿ ಎಂಟು ನೂರು ವರ್ಷಗಳೇ ಕಳೆಯುತ್ತಾ ಬಂದರೂ ಅವರ ತತ್ತ್ವಗಳ ಆಚರಣೆ ನಮ್ಮಲ್ಲಿ ಸರಿಯಾಗಿ ನಡೆದಿಲ್ಲ. ಪ್ರಸ್ತುತ ಸಾಮಾಜಿಕ ಸಂದರ್ಭ ಬಸವಣ್ಣನವರಂತಹ ವಿಚಾರವಾದಿಗಳ ವಿಚಾರಗಳೊಂದಿಗೆ ಮತ್ತೆ ಬೆಳೆಯಬೇಕಾಗಿದೆ, ಬೆಳಗಬೇಕಾಗಿದೆ.

## ಮೌಢ್ಯದ ನಿವಾರಣೆ

ಬಸವಣ್ಣನವರು ಅಂದಿನ ಸಮಾಜದಲ್ಲಿ ಬೇರೂರಿದ್ದ ಮೂಢ ನಂಬಿಕೆಗಳನ್ನು ಗುರುತಿಸಿದರು. ಅವುಗಳನ್ನು ಹೋಗಲಾಡಿಸಲು ವಿವಿಧ ರೀತಿಯಲ್ಲಿ ಯತ್ನಿಸಿದರು. ಶಕುನಗಳೆಲ್ಲಾ ಮೂಢ ನಂಬಿಕೆಗಳೆಂದು ಅವರು ತಿಳಿಯುತ್ತಾರೆ. ಮೋಕ್ಷ ಸಿಗುವುದೆಂದು ಕುರಿ-ಕೋಳಿಗಳನ್ನು ಬಲಿಕೊಡುವುದಾಗಲಿ, ಕಾಲವನ್ನು ರಾಹುಕಾಲ ಇತ್ಯಾದಿಯಾಗಿ ವಿಭಜಿಸುವುದಾಗಲಿ, ಮರವನ್ನು ಸುತ್ತಿದರೆ, ಮೂಗು

ಮುಚ್ಚಿ ಧ್ಯಾನಿಸಿದರೆ ಪುಣ್ಯ ಬರುತ್ತದೆ, ಮುಕ್ತಿ ದೊರೆಯುತ್ತದೆ ಎಂದು ತಿಳಿಯುವುದಾಗಲಿ ಜನರ ಮೌಢ್ಯ ಎನ್ನುತ್ತಾರೆ ಬಸವಣ್ಣನವರು. ಮರ, ಮಣ್ಣು, ಕಲ್ಲು, ಮಡಕೆ ಇವು ದೇವರುಗಳೆಂದು ನಂಬುವರನ್ನು ಕಂಡು ನಗುತ್ತಾರೆ.



ಹಾದಿ ಬೀದಿಯಲ್ಲಿ ಕಂಡ ನಾಗರಕಲ್ಲಿಗೆ ಹಾಲೆರೆದು ಪೂಜೆ ಮಾಡುವ ಜನ ನಿಜವಾದ ಹಾವೊಂದು ಆ ಕಲ್ಲಿನ ಸಂದಿಯಲ್ಲಿ ಕಾಣಿಸಿಕೊಂಡರೆ ಅದನ್ನು ಎಲ್ಲರೂ ಸೇರಿ ಕೊಲ್ಲುತ್ತಾರೆ. ಹಾಗೆಯೆ ಕಲ್ಲು ಲಿಂಗಕ್ಕೆ ದೇವರೆಂದು ನೈವೇದ್ಯ ಮಾಡಿ ಭಕ್ತಿಯಿಂದ ಪೂಜಿಸುವ ಜನ ನಿಜವಾಗಿ ದೈವ ಸಮಾನರಾದ ಶರಣರು ಮನೆಯ ಬಾಗಿಲಿಗೆ ಬಂದಾಗ ಇನ್ನೆಲ್ಲಿ ಅನ್ನ ನೀಡಬೇಕಾದೀತೋ ಎಂದು ಗಾಬರಿಗೊಳ್ಳುತ್ತಾರೆ. ಇಂತಹ ಆಚರಣೆಗಳನ್ನು ಅವರು ಖಂಡಿಸುತ್ತಾರೆ.

ಉಗ್ರದೇವತೆಗಳ ಭಕ್ತರಾಗಿ ಸುರೆ ಮಾಂಸಗಳನ್ನು ಕೊಂಬುವುದು, ದೇವರು-ಧರ್ಮಗಳ ಹೆಸರಿನಲ್ಲಿ ಅವ್ಯವಹಾರಿಕ, ಹಾಸ್ಯಾಸ್ಪದ, ಕೀಳುತರಹ ಭಕ್ತಿ ಮಾಡಿ, ಅಸಹ್ಯ ಹರಕೆಗಳನ್ನು ತೀರಿಸುವುದು ಮುಂತಾದ ಆಚರಣೆಗಳ ವಿರುದ್ಧ ಹೋರಾಡಿದರು. ಬಸವಣ್ಣನವರು ದೇವಾಲಯವನ್ನೇ ಬಹಿಷ್ಕರಿಸಿ ಪ್ರತಿಯೋರ್ವನಿಗೂ ವರ್ಣ, ವರ್ಗ, ಲಿಂಗ ಭೇದವಿಲ್ಲದೆ ದೀಕ್ಷೆ ನೀಡಿ ದೇಹವನ್ನೇ ದೇವಾಲಯವನ್ನಾಗಿ ಮಾಡುವ ಪದ್ಧತಿಯನ್ನು ಕಲಿಸಿದರು.

## ಮಹಿಳೋದ್ಧಾರ

ಪ್ರಾಚೀನ ಕಾಲದಿಂದಲೂ ಮಹಿಳೆಯನ್ನು ಕಡೆಗಣಿಸಿ, ಅವಳು ವೇದಾಧ್ಯಯನಕ್ಕೆ ಮತ್ತು ಮೋಕ್ಷ ಸಂಪಾದನೆಗೆ ಅನರ್ಹಳೆಂದೂ ಪುರುಷರ ಚರಣದಾಸಿಯೆಂದೂ ಆಕೆಯ ಕಾರ್ಯಕ್ಷೇತ್ರ ಮನೆಯೆಂದೂ ಹೇಳುತ್ತಾ ಆಕೆಯನ್ನು ಕೀಳಾಗಿ ಕಾಣುತ್ತ ಬಂದಿದ್ದೇವೆ. ಮಹಿಳೆಯರು ವೈರಾಗ್ಯ ಜೀವನ ಸಾಗಿಸಲು ಧರ್ಮಸೂತ್ರಕಾರರು ಸಮ್ಮತಿಸಿಲ್ಲ. ಪುರುಷರಿಗೆ ಅದು ಅನುಮತಿಸಲ್ಪಟ್ಟಿದ್ದರೂ ಮಹಿಳೆಯರಿಗೆ ಮಾತ್ರ ವೈರಾಗ್ಯದ ಬದುಕು ಸುಲಭವಲ್ಲ ಎಂಬ ಅಭಿಪ್ರಾಯ ಹಿಂದೂ ಧರ್ಮದಲ್ಲಿ ಈಗಲೂ ಇದೆ.

ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರು ಮಹಿಳೆಯರಿಗೆ ದೀಕ್ಷೆಯನ್ನಿತ್ತು ಇಷ್ಟಲಿಂಗ ನೀಡಿ, ಆಧ್ಯಾತ್ಮಿಕ ಸ್ವಾತಂತ್ರ್ಯವನ್ನು ಕೊಟ್ಟು, ಮಹಿಳೋದ್ಧಾರದ ಮಹತ್ಕಾರ್ಯವನ್ನು ಕೈಗೆತ್ತಿಕೊಂಡರು. ಶರಣ ಸಮಾಜದಲ್ಲಿ ಮಹಿಳೆ ಶರಣೆಯಾದಳು. ಅಕ್ಕ ಮಹಾದೇವಿ, ನೀಲಾಂಬಿಕೆ, ಅಕ್ಕನಾಗಮ್ಮ, ಮುಕ್ತಾಯಕ್ಕ, ಸತ್ಯಕ್ಕ, ರೇಚಕ್ಕ, ರೆಮ್ಮವ್ವೆ ಮುಂತಾದವರ ಒಂದು ಉಜ್ವಲ ಪರಂಪರೆಯೇ ಬೆಳೆಯಿತು. ಜಗತ್ತಿನಲ್ಲಿ ಯಾವ ಸಾಹಿತ್ಯದಲ್ಲೂ ಇಲ್ಲದಷ್ಟು ಸಂಖ್ಯೆಯ ಮಹಿಳಾ ಬರಹಗಾರ್ತಿಯರು ಮೂಡಿಬಂದರು.

ಬಸವಣ್ಣನವರು ಮಹಿಳೆಯರ ಹಕ್ಕನ್ನು ಎತ್ತಿಹಿಡಿದರು. ಮಹಿಳೆ ಸ್ವತಂತ್ರವಾಗಿ ಮೋಕ್ಷವನ್ನು ಪಡೆಯುವಲ್ಲಿ ಸಾಧನೆ ಮಾಡಲು ಅರ್ಹಳು ಎಂದು ಹೇಳಿದರು. 'ಹೆಣ್ಣು ಮಾಯೆಯಲ್ಲ, ಸಂಸಾರ ಸದ್ಗತಿಗೆ ತೊಡಕಲ್ಲ, ಧಾರ್ಮಿಕ ಕ್ಷೇತ್ರದಲ್ಲಿ ಹೆಣ್ಣು ಗಂಡೆಂಬ ಭೇದವಿಲ್ಲ. ಆತ್ಮ ಹೆಣ್ಣೂ ಅಲ್ಲ, ಗಂಡೂ ಅಲ್ಲ' ಮುಂತಾದ ಜೀವನ ಮೌಲ್ಯಗಳನ್ನು ಸಾರಿದರು.

ಅಂದಿನ ಶರಣೆಯರು ತಮ್ಮ ಆಧ್ಯಾತ್ಮಿಕ ಸಾಧನೆಯ ಮಾರ್ಗದಲ್ಲಿ ಶರಣರಿಗೆ ಸರಿಸಮನಾಗಿದ್ದರು. ಅಷ್ಟೇ ಅಲ್ಲ, ಕೆಲವು ಸಂದರ್ಭದಲ್ಲಿ, ವಿವೇಕದ ಬೆಳಕನ್ನು ನೀಡಿ ತಮ್ಮ ಪತಿಯರನ್ನೂ ಅಂದಿನ ಆ ಶರಣರನ್ನೂ ಮುನ್ನಡೆಸಿದರು. 'ಕಾಯಕ ನಿಂದಿತ್ತು ಹೋಗಯ್ಯಾ ಎನ್ನಾಳ್ದನೆ' ಎಂದು ಸಕಾಲದಲ್ಲಿ ತನ್ನ ಪತಿಯನ್ನು ಎಚ್ಚರಿಸಿದಳು ಲಕ್ಕಮ್ಮ. ಅವಸರದಿಂದ ಹೋಗಿ ಹೆಚ್ಚು ಅಕ್ಕಿಯನ್ನು ಮನೆಗೆ ತಂದಾಗ 'ಈಸಕ್ಕಿಯಾಸೆ ನಿಮಗೇಕೆ ಈಶ್ವರನೊಪ್ಪ, ಅಲ್ಲಿಯೇ ಸುರಿದು ಬನ್ನಿರಿ' ಎಂದು ಹೇಳಿ ಆಯ್ದಕ್ಕಿ ಮಾರಯ್ಯನಿಗೆ ಅರಿವನ್ನು ನೀಡಿದಳು ಆದರ್ಶಸತಿ ಲಕ್ಕಮ್ಮ. ಕೂಡಲ ಸಂಗಮನಲ್ಲಿ ಸಂಗಮವಾಗಲು ಕೂಡಲೆ ಹೊರಟು ಬರಬೇಕೆಂದು ಹಡಪದಪ್ಪಣ್ಣಗಳೊಡನೆ ಬಸವಣ್ಣನವರು ಹೇಳಿ ಕಳುಹಿಸಿದಾಗ ಅವರ ಪತ್ನಿ ನೀಲಾಂಬಿಕೆ 'ಅಲ್ಲಿರುವ ಸಂಗಯ್ಯನು ಇಲ್ಲಿಲ್ಲವೇ? ಅಲ್ಲಿ ಇಲ್ಲಿ ಎಂಬ ಉಭಯ ಸಂದೇಹವು ಬಲ್ಲ ಮಹಾತ್ಮರಿಗಿದು ಗುಣವೆ?' ಎಂದು ಉತ್ತರವನ್ನು ಕಳುಹಿಸಿ ತನ್ನ ನಿಜದಲ್ಲಿ ಬೆರೆದಳು.

ಇಂತಹ ಅನೇಕ ಆದರ್ಶ ಜೋಡಿಗಳು ದಾಂಪತ್ಯ ಜೀವನದ ಹಿರಿದಾದ ಆದರ್ಶವನ್ನು ಎತ್ತಿ ಹಿಡಿದು ಲೋಕಕ್ಕೆ ಆದರ್ಶವಾಗಿದ್ದಾರೆ. ಅಷ್ಟೇ ಅಲ್ಲದೆ ಕಲ್ಯಾಣದ ಅನುಭವ ಮಂಟಪದಲ್ಲಿ ಶರಣಗೋಷ್ಠಿಯಲ್ಲಿ ಭಾಗವಹಿಸಿದ ಶರಣೆಯರು ತಮ್ಮ ದಿವ್ಯ ಅನುಭಾವದಿಂದ ಅನುಪಮ ಪ್ರತಿಭೆಯಿಂದ ಅಮೂಲ್ಯ ವಚನಗಳನ್ನು ರಚಿಸಿ ಸಾಹಿತ್ಯಕ್ಕೂ ಅಪಾರವಾದ ಅನರ್ಘ್ಯ ಕೊಡುಗೆಗಳನ್ನು ನೀಡಿ ಶ್ರೇಷ್ಠ ವಚನಕಾರ್ತಿಯರಾಗಿದ್ದಾರೆ.

## ಬಸವಣ್ಣನವರ ನೈತಿಕ ವಿಚಾರಧಾರೆ

ಬಸವಣ್ಣನವರು ತಾವು ಸ್ವತಃ ನೀತಿವಂತರಾಗಿದ್ದುದಲ್ಲದೇ ನೀತಿವಾದಿಗಳೂ ಆಗಿ ಒಂದು ಸಿದ್ಧಾಂತವನ್ನೇ ಜಗದ ಮುಂದಿಟ್ಟರು. ಅವರು ನೀತಿ ಶಾಸ್ತ್ರಸಂಹಿತೆಯನ್ನು ಸಪ್ತಸೂತ್ರಗಳಲ್ಲಿ ಹೀಗೆ ಪ್ರತಿಪಾದಿಸಿದ್ದಾರೆ :

**ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ**
**ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ**
**ತನ್ನ ಬಣ್ಣಿಸಬೇಡ, ಇತರ ಹಳಿಯಲುಬೇಡ**
**ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ**
**ಇದೇ ನಮ್ಮ ಕೂಡಲ ಸಂಗಮದೇವನ ಒಲಿಸುವ ಪರಿ.**

## ಬಿಡಿಬಿಡಿಸಿ ಬೇರ್ಪಡಿಸುವ ವಿಚಾರವಾದಕ್ಕಿಂತಲೂ ಒಟ್ಟುಗೂಡಿಸಿ ಸಮನ್ವಯವನ್ನು ಸಾಧಿಸುವ ಭಾವ ನಿಷ್ಠತೆಯೇ ಬಸವಣ್ಣನವರ ದೃಷ್ಟಿಕೋನ.

ಧೃತಿಗೆಟ್ಟು ಅನ್ಯರ ಬೇಡದೆ, ಮತಿಗೆಟ್ಟು ಅನ್ಯರ ಮುಖಸ್ತುತಿ ಮಾಡದೆ, ಪರಧನ-ಪರಸತಿಯರಿಗೆಳಸದೆ, ದುರ್ಜನರ ಸಹವಾಸ ಮಾಡದೆ, ಅನ್ಯರಿಗೆ ಕೆಡುಕು ಬಯಸದೆ, ದುಶ್ಚಟ ದುರ್ಗುಣಗಳಿಲ್ಲದಿರುವುದು ವ್ಯಕ್ತಿಗತ ನೀತಿ. ಜಾತಿ ಭೇದ ಮಾಡದೆ, ದೀನ ದಲಿತರ ಶೋಷಣೆ ಮಾಡದೆ ಒಳಿತಿಗೆ ವಿಘ್ನ ಒಡ್ಡದೆ, ಅನ್ಯರ ಪ್ರಗತಿ ಕಂಡು ಸಂತೋಷಿಸುತ್ತ ಬಾಳುವುದು ಸಾಮಾಜಿಕ ನೀತಿ. ಸಕಲ ಜನರಿಗೆ ಲೇಸನ್ನು ಬಯಸಿ, ಜೀವಿ ಜೀವಿಗಳಲ್ಲಿ ಭೇದಮಾಡದೆ ವಿಶ್ವ ಕುಟುಂಬಿಯಾಗಿ ಬಾಳುವುದು ವಿಶ್ವ ಮಾನವ ನೀತಿ.

'ದೇವಲೋಕ-ಮರ್ತ್ಯಲೋಕಗಳು ಬೇರೆಲ್ಲೂ ಇಲ್ಲ. ಸತ್ಯವ ನುಡಿದರೆ ಅಲ್ಲಿ ಸುಖ ಶಾಂತಿ. ಮಿಥ್ಯವ ನುಡಿದರೆ ಅಲ್ಲಿ ದುಃಖ, ದಾರಿದ್ರ್ಯ, ಶೋಷಣೆ. ಸದಾಚಾರವಿಟ್ಟುದು ಸ್ವರ್ಗ, ದುರಾಚಾರವಿಟ್ಟುದು ನರಕ'. ಇದು ಬಸವಣ್ಣನವರ ನೀತಿಸೂತ್ರ.

**ಉಪಸಂಹಾರ**

ಬಸವಣ್ಣನವರ ಸಮಾಜ ಸುಧಾರಣ ಕಾರ್ಯಗಳನ್ನು ಅವಲೋಕಿಸಿದಾಗ ನಮಗೆ ಕಾಣುವುದು ಅವರ ಸಮಗ್ರವೂ ವಿಶುದ್ಧವೂ ಆದ ದೃಷ್ಟಿ, ಆಲೋಚನೆಗೂ ಅನುಷ್ಠಾನಕ್ಕೂ ಕಲ್ಪಿಸಿದ ಭದ್ರ ಸೇತುವೆ. ವಯಸ್ಸು, ಲಿಂಗ, ಜಾತಿ, ಕಸಬು, ಪ್ರದೇಶ, ಸ್ಥಾನ, ಇತ್ಯಾದಿ ಯಾವುದೂ ಶಾಶ್ವತವಲ್ಲ, ಆತ್ಮವೊಂದೇ ಶಾಶ್ವತ. ಸಮಾಜವು ಕರ್ತಾರನ ಕಮ್ಮಟ, ಕರ್ತಾರನ ವಾಸಸ್ಥಾನ; ವ್ಯಕ್ತಿಯೂ ದೇವನ ಮನೆ.

ಹೀಗೆ ವ್ಯಕ್ತಿ, ಗುಂಪು, ಸಮುದಾಯ, ಸಂಬಂಧಗಳ ಜಾಲ ಎಲ್ಲವೂ ಒಂದೇ ವಸ್ತುವಿನ ವಿವಿಧ ಅಂಶಗಳು. ಇಂಥ ಹಿನ್ನೆಲೆಯಲ್ಲಿಯೇ ಮಾನವನು ತನ್ನ ಜೀವನವನ್ನು ರೂಪಿಸಿಕೊಳ್ಳಬೇಕು. ಇಲ್ಲಿ ತರ್ಕಕ್ಕಿಂತ ಹೃದಯಕ್ಕೆ ಅಗ್ರಸ್ಥಾನ. ವಿಶುದ್ಧ ಭಾವನೆಗೇ ಮಾನ್ಯತೆ. ಆದುದರಿಂದ ಬಿಡಿಬಿಡಿಸಿ ಬೇರ್ಪಡಿಸುವ ವಿಚಾರವಾದಕ್ಕಿಂತಲೂ ಒಟ್ಟುಗೂಡಿಸಿ ಸಮನ್ವಯವನ್ನು ಸಾಧಿಸುವ ಭಾವ ನಿಷ್ಠತೆಯೇ ಬಸವಣ್ಣನವರ ದೃಷ್ಟಿಕೋನ ಎಂಬುದು ಅರಿವಾಗುತ್ತದೆ. ✿

## ಅನ್ಯರಿಗೆ ಅಸಹ್ಯಪಡಬೇಡ

ಒಂದು ದಿನ ಶ್ರೀರಾಮಕೃಷ್ಣರು ಡಾ.ಮಹೇಂದ್ರಪಾಲರೊಡನೆ ತಮ್ಮ ಕೊಠಡಿಯಿಂದ ಪಶ್ಚಿಮದ ಬಾಗಿಲಿನ ಮೂಲಕ ಹೊರಬಂದರು. ಇಬ್ಬರೂ ತೋಟದ ಹಾದಿಯಲ್ಲಿ ಮುಂದುವರಿದರು. ಐದು ಆರು ಗಜಗಳ ದೂರದಲ್ಲಿ ಓರ್ವ ಮಹಿಳೆಯನ್ನು ಅವರು ಕಂಡರು. ಆಕೆ ಬಕೆಟ್ಟಿನಲ್ಲಿ ಹೇಸಿಗೆಯನ್ನು ಹೊತ್ತುಕೊಂಡು ಬರುತ್ತಿದ್ದಳು. ಶ್ರೀರಾಮಕೃಷ್ಣರು ಆಕೆಯನ್ನು ನೋಡಿ ನೆಲದಮೇಲೆ ದಂಡವತ್ ಪ್ರಣಾಮ ಮಾಡುತ್ತ, 'ತಾಯಿ, ನೀನಲ್ಲದೆ ಇನ್ನಾರು ಈ ಕೆಲಸವನ್ನು ಮಾಡಬಲ್ಲರು?' ಎಂದು ಉದ್ಗರಿಸಿದರು. ಇದರ ಮೂಲಕ ಯಾರನ್ನೂ ಕೀಳಾಗಿ ಕಾಣಬಾರದೆಂಬುದನ್ನು ಶ್ರೀರಾಮಕೃಷ್ಣರು ಬೋಧಿಸಿದರು.

ಒಂದು ದಿನ ಬ್ರಾಹ್ಮಣನೊಬ್ಬನು ಬುದ್ಧನನ್ನು ಸಂಧಿಸಿದನು. ಆತನಿಗೆ ಅವನೊಬ್ಬ ಮಾನವ ಎಂದೇ ಅನಿಸಲಿಲ್ಲ. 'ನೀನು ದೇವತೆಯೆ?' ಎಂದು ಬ್ರಾಹ್ಮಣ ಕೇಳಿದ. ಬುದ್ಧನು ಹೇಳಿದ : 'ಇಲ್ಲ.'

'ನೀನು ಅತಿಪ್ರಾಕೃತ ವ್ಯಕ್ತಿಯೆ?'

'ಇಲ್ಲ, ನಾನು ತುಂಬ ಪ್ರಾಕೃತ.'

'ನೀನು ಸಾಮಾನ್ಯ ಮನುಷ್ಯನೆ?'

'ಇಲ್ಲ,' ಬುದ್ಧ ಉತ್ತರಿಸಿದ.

ಬ್ರಾಹ್ಮಣನು ಗೊಂದಲಕ್ಕೊಳಗಾದ. 'ಹಾಗಾದರೆ ನೀನಾರು?' ಎಂದು ಕೇಳಿದ.

ಬುದ್ಧನ ಉತ್ತರ : 'ನಾನು ಬುದ್ಧ.'